**ಎಂ ವಿ ಸಿ 975/2024 ಪಿಡಬ್ಲ್ಯೂ 1**

**ಸಾಕ್ಷಿಯನ್ನು ದಿ: 11.08.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎಸ್ ಡಿ ವಕೀಲರಿಂದಃ**

ನಾನು ಚಾಲಕ ವೃತ್ತಿ ಮಾಡುತ್ತೇನೆ. ನಾನು ಸುಮಾರು ರೂ.20 ರಿಂದ 25 ಸಾವಿರ ಮಾಡುತ್ತೇನೆ. ಅಪಘಾತವು ದಿನಾಂಕ 13.02.2024 ರಂದು ಮಧ್ಯಾಹ್ನ ಸುಮಾರು 12.00 ಗಂಟೆ ಸಮಯದಲ್ಲಿ ಕಡತನಾಳು ಗೇಟ್ ಆರತಿ ಉಕ್ಕಡ ಬಳಿ ಆಯಿತು. ನಾನು ಅಂದು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ, 40 ರಿಂದ 50 ಮೀಟರ್ ವೇಗದಲ್ಲಿ ಹೋಗುತ್ತಿದ್ದೆ. ಅಪಘಾತ ಆದ ಸಮಯದಲ್ಲಿ ನನ್ನ ಮುಂದೆ ಸುಮಾರು 200 ಮೀಟರ್ ದೂರದಲ್ಲಿ ಒಂದು ದ್ವಿಚಕ್ರ ವಾಹನ ಹೋಗುತ್ತಿತ್ತು. ಸದರಿ ದ್ವಿಚಕ್ರ ವಾಹನ ಹಾಗೂ ಲಾರಿ ನಡುವೆ ಸುಮಾರು 50 ಮೀಟರ್ ಅಂತರವಿತ್ತು. ಲಾರಿಯು ಸದರಿ ದ್ವಿಚಕ್ರ ವಾಹನಕ್ಕೆ ಡಿಕ್ಕಿಪಡಿಸಿ ಸುಮಾರು 100 ಮೀಟರ್ ವರೆಗೆ ಸದರಿ ದ್ವಿಚಕ್ರ ವಾಹನವನ್ನು ಎಳೆದೊಯ್ದು ನಮ್ಮ ಕಾರಿಗೂ ಡಿಕ್ಕಿಪಡಿಸಿ ನಂತರ ಎಡಗಡೆಗೆ ಹೋಗಿ ನಿಂತುಕೊಂಡಿತು. ಪೊಲೀಸರು ಸಲ್ಲಿಸಿರುವ ಅಂತಿಮ ವರದಿ ಸರಿಯಾಗಿದೆ. ಹಾಗೆ ನಿಶಾನೆ ಪಿ 9 ಮತ್ತು 10 ರಲ್ಲಿರುವ ಡಿಸ್ ಚಾರ್ಜ ಸಮ್ಮರಿ ಹಾಗೂ ಗಾಯದ ಪ್ರಮಾಣಪತ್ರ ಸರಿಯಾಗಿವೆ. ನಿಶಾನೆ ಪಿ 10 ರಲ್ಲಿನ ಗಾಯದ ಪ್ರಮಾಣಪತ್ರದ ಪ್ರಕಾರ ನನಗೆ ಆಗಿರುವ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಎಂದರೆ ಸರಿ. ನಿಶಾನೆ ಪಿ 8 ರಲ್ಲಿ ಹಾಜರುಪಡಿಸಿರುವ ಬಿಲ್ಲಿನಲ್ಲಿ ಆಸ್ಪತ್ರೆಯ ನೋಂದಣಿ ಸಂಖ್ಯೆ ಇಲ್ಲ ಎಂದರೆ ಸರಿ, ಅದು ಆನ್ ಲೈನ್ ಬಿಲ್ಲು ಆಗಿದೆ.

ಈ ಅಪಘಾತ ಸಂಭವಿಸುವುದಕ್ಕಿಂತ 5 ವರ್ಷಗಳ ಮೊದಲು ನನಗೆ ಪಾರ್ಶ್ವವಾಯು ಆಗಿತ್ತು ಎಂದರೆ ಸರಿಯಲ್ಲ. ನಾನು ಬಿ ಎ ಪದವಿ ಓದಿದ್ದೇನೆ. ನನಗೆ ಇಂಗ್ಲೀಷ್ ಓದಲು ಬರುತ್ತದೆ. ನಿಶಾನೆ ಪಿ 9 ರಲ್ಲಿನ ಡಿಸ್ ಚಾರ್ಜ ಸಮ್ಮರಿಯಲ್ಲಿ " old case of CVT on treatment since 5 years" ಎಂದು ನಮೂದು ಆಗಿದೆ ಎಂದರೆ ಸರಿ. CVT

ಎಂಬುದರ ಅರ್ಥ cerebral venous thrombosis ಎಂದರೆ ಸರಿ. ಮೆದುಳಿನ ನರದಲ್ಲಿ ರಕ್ತ ಹೆಪ್ಪುಗಟ್ಟುವಿಕೆಯಿಂದ ಆಗುವ ಪಾರ್ಶ್ವವಾಯು CVT ಆಗುತ್ತದೆ ಎಂದರೆ ಸರಿಯಲ್ಲ.

ನನಗೆ CVT ಕಳೆದ 5 ವರ್ಷಗಳಿಂದ ಆಗಿದೆ. ನಾನು ಪ್ರಾರಂಭದಲ್ಲಿ ಜೆ ಎಸ್ ಎಸ್ ಆಸ್ಪತ್ರೆಗೆ CVT ಗೆ ಚಿಕಿತ್ಸೆ ಪಡೆದುಕೊಂಡೆ. CVT ಇಂದ ನನಗೆ ತಲೆನೋವು ಬರುತ್ತಿತ್ತು. ನನಗೆ ಕೇವಲ ತಲೆನೋವು ಮಾತ್ರ ಬರದೆ ಉಸಿರಾಟದ ಸಮಸ್ಯೆಯು ಸಹ ಇತ್ತು ಎಂದರೆ ಸರಿಯಲ್ಲ. ಈ ಕಾರಣದಿಂದ ನಾನು ಯಾವಾಗಲೂ ಬಿಸಿನೀರಿನ ಹಬೆಯನ್ನು ತೆಗೆದುಕೊಳ್ಳಬೇಕು ಎಂದು ವೈದ್ಯರು ನನಗೆ ಸಲಹೆ ನೀಡಿದ್ದರು ಎಂಬ ಸಂಗತಿ ನಿಶಾನೆ 9 ರಲ್ಲಿ ನಮೂದು ಆಗಿದೆ ಎಂದರೆ ಸರಿಯಲ್ಲ. ನಿಶಾನೆ ಪಿ 9 ರಲ್ಲಿ ವೈದ್ಯರು "Steam inhalation 2 – 3 times/day ಮತ್ತು avoid Strenuous activities ಎಂದು ನನಗೆ ಸಲಹೆ ನೀಡಿದ್ದಾರೆ ಎಂದರೆ ಸರಿ, ಅಪಘಾತ ಹಿನ್ನಲೆಯಲ್ಲಿ ಅನಘ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ಕಾರಣ ಅವರು ಸಲಹೆ ನೀಡಿದ್ದಾರೆ. ನಾನು ಅನಘ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ನಿಶಾನೆ ಪಿ 8 ರಲ್ಲಿನ ಬಿಲ್ಲನ್ನು ಹೊರತುಪಡಿಸಿದರೆ ಔಷಧಿ ಬಿಲ್ಲುಗಳು ಹಾಗೂ ಔಷಧಿ ಸಲಹಾ ಚೀಟಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ವೈದ್ಯರು ಪರಸ್ಪರ ಷರೀಕ್ಕಾಗಿ ನನಗೆ ಆಗದೆ ಇರುವಂತಹ ಗಾಯಗಳನ್ನು ಸಹ ಸೇರಿಸಿ ನಿಶಾನೆ ಪಿ 8 ರಲ್ಲಿನ ಬಿಲ್ಲನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ನಾನು ಚಾಲನಾ ವೃತ್ತಿ ಮಾಡುತ್ತಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ನಾನು ಮಾಸಿಕ ರೂ.25 ಸಾವಿರ ಸಂಪಾದನೆ ಮಾಡುತ್ತಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ನಮಗೆ ಯಾವುದೇ ವೇತನ ಚೀಟಿಯಂತಹ ದಾಖಲೆಗಳನ್ನು ನೀಡುವುದಿಲ್ಲವಾದ ಕಾರಣ ಹಾಜರುಪಡಿಸಿಲ್ಲ. ನಾನು ಈಗಲೂ ಸಹ ಚಾಲಕ ವೃತ್ತಿಯನ್ನು ಮಾಡುತ್ತಿದ್ದೇನೆ, ಆದರೆ ಈಗ ಮೊದಲಿನ ಹಾಗೆ ನಿರಂತರವಾಗಿ ಚಾಲನೆ ಮಾಡಲು ಆಗುವುದಿಲ್ಲ. ನಾನು ಮೊದಲು ನಿರಂತರವಾಗಿ ಹಗಲು

ರಾತ್ರಿ ಚಾಲನೆ ಮಾಡುತ್ತಿದ್ದ ಸಂಬಂಧ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ನಾನು ಈಗ ಆರೋಗ್ಯವಾಗಿ ಚೆನ್ನಾಗಿದ್ದೇನೆ ಎಂದರೆ ಮೊದಲಿನ ಹಾಗೆ ಇಲ್ಲ. ಸಾಧ್ಯವಾದರೆ ವಿಮಾ ಕಂಪನಿಯಿಂದ ಹಣವನ್ನು ಲಪಟಾಯಿಸುವ ದುರುದ್ದೇಶದಿಂದ ನಾನು ಮತ್ತು ವೈದ್ಯರು ಪರಸ್ಪರ ಷರೀಕ್ಕಾಗಿ ಸುಳ್ಳು ಪ್ರಕರಣ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**